**<u>ಮೆಃ ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಮುಧೋಳ</u>**

C.C.No.809/2012
CW15/PW12

| | |
|---|---|
| ಹೆಸರು | ರಮೇಶ ದಂಡಿನ |
| ತಂದೆಯ ಹೆಸರು | ಶೀವಪ್ಪ |
| ವಯಸ್ಸು | 39 ವರ್ಷ |
| ಉದ್ಯೋಗ | ವಾಹನ ಚಾಲಕ |
| ವಾಸಸ್ಥಳ | ಲೋಕಾಪುರ, ತಾಃ ಮುಧೋಳ |

**ದಿನಾಂಕಃ 05-02-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯ ವಿಚಾರಣೆಃ- ಎ.ಪಿ.ಪಿ ರವರಿಂದ.</u>**

ನನಗೆ ಆರೋಪಿತರ ಮತ್ತು ಚಾಸಾ-14 ರವರ ಪರಿಚಯ ಇರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಹಾಗೂ ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ರವರು ವಿನಂತಿಸಿದ್ದರಿಂದ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)***

**<u>ಪಾಟಿ ಸವಾಲು- ಎ.ಪಿ.ಪಿ ರವರಿಂದ.</u>**

ದಿನಾಂಕ 16.06.2012 ರಂದು ಮುಂಜಾನೆ ನಾನು ಮತ್ತು ಚಾಸಾ-14 ಕೂಡಿಕೊಂಡು ಲೋಕಾಪುರದಲ್ಲಿರುವಾಗ ನನ್ನ ಗೆಳೆಯನಾದ ಚಾಸಾ-16 ನನಗೆ ದುರ್ಗಮ್ಮ ಗುಡಿಯ ಹತ್ತಿರ ಬರಲು ಹೇಳಿದ ಮೇರೆಗೆ ನಾನು ಮತ್ತು ಚಾಸಾ-14 ಕೂಡಿಕೊಂಡು ಅಲ್ಲಿಗೆ ಹೋದೇವು ಎಂದರೆ ಸರಿಯಲ್ಲ. ಆಗ ಅಲ್ಲಿ ಚಾಸಾ-14 ಮತ್ತು ಆರೋಪಿ ನಂ.3 ರವರು ಇದ್ದರೂ ಎಂದರೆ ಸರಿಯಲ್ಲ. ಆಗ ಚಾಸಾ-14 ರವರು ಆರೋಪಿ ನಂ. 3 ರವರ ಮನೆಯಲ್ಲಿ ಕಾರ್ಯ ಇರುತ್ತದೆ, ಆದ್ದರಿಂದ ಅವನಿಗೆ ಹಣಕಾಸಿನ ಅಡಚಣೆ ಇರುತ್ತದೆ ಆದ್ದರಿಂದ ಅವನು ಕೆಲವು ಬಂಗಾರದ ಆಭರಣಗಳನ್ನು ತಂದಿದ್ದಾನೆ ಅವುಗಳನ್ನು ಎಲ್ಲಿಯಾದರೂ ಮಾರಾಟ ಮಾಡಿ ಅಥವಾ ಒತ್ತೆ ಇಟ್ಟು ಹಣ ಕೊಡಿಸು ಮತ್ತು ಕೆಲವು ಆಭರಣಗಳನ್ನು ಮುರಿಸಿ ಅದರ ಬದಲಾಗಿ ಬೇರೆ ಹೊಸ ಚೈನಗಳನ್ನು ಕೊಡಿಸು ಅಂತಾ ಹೇಳಿದ ಮೇರೆಗೆ ನಾನು ಚಾಸಾ-14 ರವರಿಗೆ ಬಾಗಲಕೋಟದಲ್ಲಿರುವ ಮುತ್ತೂಟ ಪಾಯನಾನ್ಸಗೆ ಕರೆದುಕೊಂಡು ಹೋದೆನು ಎಂದರೆ ಸರಿಯಲ್ಲ. ನಂತರ ಸದರಿ ಬಂಗಾರದ ಆಭರಣಗಳ ಪೈಕಿ ಮೂರು ಎಳೆಯ ಚಪ್ಪಲ ಹಾರ ಒಂದು, ಲಾಂಗ್ ಚೈನ ಹಾಗೂ ಕಿವಿಯಲ್ಲಿನ ಓಲೆಗಳು ಎರಡು ಹಿಗೇ ಒಟ್ಟು 10 ತೋಲೆ ಬಂಗಾರದ ಆಭರಣಗಳನ್ನು ಮುತ್ತೂಟ ಪಾಯನಾನ್ಸದಲ್ಲಿ ಚಾಸಾ-14 ರವರ ಹೆಸರಿನಲ್ಲಿ ಒತ್ತೆ ಇಟ್ಟು ಅದರ ಬದಲಾಗಿ ರೂ 176000/- ತೆಗೆದುಕೊಂಡೆವು ಎಂದರೆ ಸರಿಯಲ್ಲ. ನಂತರ ಉಳಿದ ಕೆಲವು ಬಂಗಾರದ ಆಭರಣಗಳನ್ನು ಚಾಸಾ-14

ರವರ ಗೆಳೆಯನಾದ ಚಾಸಾ-17 ರವರಿಗೆ ಫೋನ ಮಾಡಿ ಕರೆಯಿಸಿಕೊಂಡು ಅವನಿಗೆ ಸದರಿ ವಿಷಯ ತಿಳಿಸಿ ಬಂಗಾರದ ಆಭರಣಗಳನ್ನು ಮುರಿಸಿ ಮೂರು ಹೊಸ ಕೊರಳಲ್ಲಿನ ಚೈನಗಳನ್ನು ಮಾಡಿಸಿಕೊಡುವಂತೆ ತಿಳಿಸಿದೇವು ಎಂದರೆ ಸರಿಯಲ್ಲ. ನಂತರ ಚಾಸಾ-17 ರವರು ನಮ್ಮನ್ನು ಚಾಸಾ-18 ರವರ ಕಡೆಗೆ ಕರೆದುಕೊಂಡು ಹೋಗಿ ಆರೋಪಿ ನಂ.3 ರವರ ಹತ್ತಿರ ಇದ್ದ ಮುತ್ತಿನ ಮೂರು ಎಳೆಯ ಸರ ಒಂದು, ಮುತ್ತಿನ ಬಳೆ ಒಂದು, ಬಿಲ್ವರ ಬಳೆಗಳು ಎರಡು ಮತ್ತು ಕೊರಳಲ್ಲಿಯ ಚೈನ ಒಂದು ಹೀಗೆ ಒಟ್ಟು 7.5 ತೋಲೆಯ ಬಂಗಾರವನ್ನು ಕೊಟ್ಟ ಸಮನಾದ ತೂಕದ ಮೂರು ಕೊರಳಲ್ಲಿನ  ಚೈನಗಳನ್ನು ಮಾಡಿಕೊಡಿ ಅಂತಾ ಹೇಳಿದೇವು ಎಂದರೆ ಸರಿಯಲ್ಲ. ಆಗ ಅವನು ನಮಗೆ 15 ದಿವಸ ಬಿಟ್ಟು ಬನ್ನಿರಿ ಅಂತಾ ಹೇಳಿದಾಗ ನಾವು 08 ದಿನ ಬಿಟ್ಟು ಬರುತ್ತೇವೆ ಅಂತಾ ಹೇಳಿ ಬಂದೇವು ಎಂದರೆ ಸರಿಯಲ್ಲ.

ದಿನಾಕಂ 21.06.2012 ರಂದು ಮುಂಜಾನೆ ನಾನು ಲೋಕಾಪುರದಲ್ಲಿರುವಾಗ ಪೋಲಿಸರು ನನ್ನನ್ನು ಮತ್ತು ಚಾಸಾ-14 ಮತ್ತು 16 ರವರನ್ನು ಪೋಲಿಸ ಠಾಣೆಗೆ ಕರೆಯಿಸಿ ಅವರ ತಾಬಾದಲ್ಲಿದ್ದ 05 ಜನ ಆರೋಪಿತರನ್ನು ತೋರಿಸಿ ಸದರಿಯವರೆ ಮುಧೋಳದಲ್ಲಿಯ ಚಾಸಾ-1 ರವರ ಮನೆಯಲ್ಲಿಯ ಈ ಮೇಲೆ ನಮೂದಿಸಿದ ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಬಂದು ನಮ್ಮ ಮುಖಾಂತರ ಅಡವಿಟ್ಟು ಹಾಗೂ ಚಾಸಾ-18 ರವರ ಹತ್ತಿರ ಕೊಟ್ಟಿರುತ್ತಾರೆ ಎಂದು ಹೇಳಿದರು ಎಂದರೆ ಸರಿಯಲ್ಲ.

ಈ ಕುರಿತು ನಾನು ದಿನಾಂಕ 21.06.2012 ರಂದು ಈಗ ನನಗೆ ಓದಿ ಹೇಳಿದ ಹಾಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಹೇಳಿಕೆಯನ್ನು ಈಗ ನಿಪಿ-26 ಎಂದು ಗುರುತಿಸಲಾಯಿತು. ನಿಪಿ-26 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹಿತ ಆರೋಪಿ ನಂ.3 ಇವನು ನನ್ನ ಸ್ನೇಹಿತ ಆಗಿರುವುದರಿಂದ ಉಳಿದ ಎಲ್ಲ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ-** ಆರೋಪಿತರ ಪರ ವಕೀಲರು ಪಾಟೀ ಸವಾಲು ಏನು ಇಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ  ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ